ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ವಿಭಜಿಸಿ 4 ಸಂಸ್ಥೆಗಳನ್ನಾಗಿಸಲು ತೀರ್ಮಾನಿಸಿದ್ದು, ಪ್ರಾರಂಭಿಕವಾಗಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯನ್ನು 15-08-1997 ರಿಂದ ಪ್ರಾರಂಭಿಸಲು ಹಾಗೂ ಇನ್ನೆರಡು ಸಂಸ್ಥೆಗಳಾದ ಹುಬ್ಬಳ್ಳಿ ಕೇಂದ್ರ ಸ್ಥಾನವಾಗಿರುವ ವಾಯವ್ಯ ಸಾರಿಗೆ ಸಂಸ್ಥೆ ಹಾಗೂ ಗುಲ್ಬರ್ಗಾ ಕೇಂದ್ರಸ್ಥಾನವಾಗಿರುವ ಈಶಾನ್ಯ ಸಾರಿಗೆ ಸಂಸ್ಥೆಗಳ ಪೈಕಿ ಹುಬ್ಬಳ್ಳಿ ಸಂಸ್ಥೆಯನ್ನು ರಾಜ್ಯೋತ್ಸವ ದಿವಸವಾದ 1-11-1997 ರಂದು ಪ್ರಾರಂಭಿಸಿ ನಂತರ ಗುಲ್ಬರ್ಗಾ ಕೇಂದ್ರದ ಸಂಸ್ಥೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ವಿಭಜಿಸಿ ಪ್ರತ್ಯೇಕ ಸಂಸ್ಥೆಗಳನ್ನು ಒಂದಾದ ನಂತರ ಇನ್ನೊಂದನ್ನು ಪ್ರಾರಂಭಿಸಲು ಪ್ರಮುಖ ಕಾರಣವೇನೆಂದರೆ ಬೃಹದಾಕಾರವಾಗಿ ಬೆಳೆದಿರುವ ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿಯವರಿಂದಲೇ ವಿಭಜಿತ ಸಾರಿಗೆ ಸಂಸ್ಥೆಗಳನ್ನು ನಿರ್ವಹಿಸುವುದರಿಂದ ವಿಭಜನೆಯಾದ ನಂತರ ಆಡಳಿತ ಖರ್ಚು ಹೆಚ್ಚಾಗದ ಹಾಗೆ ಎಚ್ಚರ ವಹಿಸಿ ಪ್ರಯತ್ನಿಸುವುದೇ ಪ್ರಮುಖ ಕಾರಣವಾಗಿದೆ.

ದಿನಾಂಕ 15-08-1997 ರಂದು ಪ್ರಾರಂಭವಾಗುವ ಬೆಂಗಳೂರು ನಗರ ಸಾರಿಗೆ ಸಂಸ್ಥೆಗೆ ಇರುವ ಸಿಬ್ಬಂಧಿಯಿಂದಲೇ ಹಂಚಿಕೆ ಮಾಡಿದ ನಂತರ ಆಗು ಹೋಗುಗಳನ್ನು ಗಮನಿಸಿ, ಹುಬ್ಬಳ್ಳಿಯ ಸಂಸ್ಥೆಗೆ ಅನುಗುಣವಾಗಿ ಸಿಬ್ಬಂದಿಯನ್ನು ಹಂಚಲು ಅನುಕೂಲವಾಗುವುದರಿಂದ ಮುಂದೆ ಗುಲ್ಬರ್ಗಾ ಸಂಸ್ಥೆಯನ್ನು ರೂಪಿಸಲು ಅನುಕೂಲವಾಗಬಹುದೆಂದು ಯೋಚಿಸಲಾಗಿದೆ.

ಶ್ರೀ ಡಿ. ಆರ್. ಪಾಟೀಲ್ : 15-8-97 ಆದು ಆದಮೇಲೆ ಉಳಿದ ಸಿಬ್ಬಂದಿಯನ್ನು ರಿಪ್ಯಾಟ್ರೀಷನ್ ಮಾಡಬೇಕಾಗುತ್ತದೆ ಎನ್ನುವ ತಮ್ಮ ಸಮಸ್ಯೆಯನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಆದರೆ ಅದನ್ನು ನವೆಂಬರ್ 1ರ ಬದಲಾಗಿ ಆಕ್ಟೋಬರ್ 2 ಗಾಂಧಿ ಜಯಂತಿ ದಿವಸ ಮಾಡಬಹುದಲ್ಲಾ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : 15ನೇ ಆಗಸ್ಟ್‌ರಂದು ಮಾಡಲು ಬೆಂಗಳೂರಿನಲ್ಲಿ ಎಲ್ಲಾ ರೀತಿಯಲ್ಲಿ ವ್ಯವಸ್ಥೆ ಇದೆ. ಇಲ್ಲಿ ರೀಜನಲ್‌ವರ್ಕ್‌ಶಾಪ್ ಇದೆ, ಇಲ್ಲಿ ಮಾಡಲು ತೊಂದರೆ ಆಗುವುದಿಲ್ಲ. ಹುಬ್ಬಳ್ಳಿಯಲ್ಲಿ ಕೂಡ ಲೀಗಲ್ ಫಾರ್ಮೇಷನ್‌ನ್ನು ಆಗಸ್ಟ್ 15 ರಂದು ಪ್ರಾರಂಭಮಾಡಬೇಕೆಂಬ ಉದ್ದೇಶವನ್ನು ಇಟ್ಟು ಕೊಂಡಿದ್ದೇವೆ.

ವಿತ್ತೀಯ ಕರ್ಯಕಲಾಪಗಳು

1997-98ನೇ ಸಾಲಿನ ಬೇಡಿಕೆಗಳ ಮಂಡನೆ

ಅಧ್ಯಕ್ಷರು : ಯಡಿಯೂರಪ್ಪನವರೇ, ಈಗ ಬೇಡಿಕೆಗಳನ್ನು ಮೂವ್ ಮಾಡಿಸೋಣ, ಚರ್ಚೆ ಏನೂ ಬೇಡ. ವಿತ್ತೀಯ ಕಾರ್ಯಕಲಾಪಗಳು. 1997-98ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಸಂಖ್ಯೆ 30,31.

30- ಗೃಹ ನಿರ್ಮಾಣ (ಸಹಕಾರಿ ನಿವಾಸದ ಕಟ್ಟಡಗಳ ಹೊರತುಪಡಿಸಿ)

31 - ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ, ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತು ಪಡಿಸಿ)

ಬೇಡಿಕೆಗಳನ್ನು ಮೂವ್ ಮಾಡಬೇಕು.

ಅನುದಾನ ಬೇಡಿಕೆಗಳು

ಬೇಡಿಕೆ ಸಂಖ್ಯೆ : 30 : ಗೃಹ ನಿರ್ಮಾಣ (ಸಹಕಾರಿ ನಿವಾಸದ ಕಟ್ಟಡಗಳ ಹೊರತುಪಡಿಸಿ)

ಶ್ರೀ ಹೆಚ್.ಡಿ. ರೇವಣ್ಣ : (ವಸತಿ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇಲೆ 31-3-98ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 30ಕ್ಕೆ ಸಂಬಂಧಿಸಿದ ಸಂದಾಯದ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಿಂದ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಿಗೆ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಅಧ್ಯಕ್ಷರು : ಬೇಡಿಕೆಯನ್ನು ಮಂಡಿಸಲಾಗಿದೆ. ಈಗ ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

ಬೇಡಿಕೆ ಸಂಖ್ಯೆ 31: ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ, ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

ಶ್ರೀ ಬಿ.ಎನ್. ಬಚ್ಚೇಗೌಡ : (ನಗರಾಭಿವೃದ್ಧಿ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇಲೆ 31-3-98ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 31ಕ್ಕೆ ಸಂಬಂಧಿಸಿದ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಿಗೆ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಬೇಡಿಕೆಯನ್ನು ಮಂಡಿಸಲಾಗಿದೆ. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 10-00 ಗಂಟೆಗೆ ಪುನಃ ಸಭೆಯು ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6ಗಂಟೆ40 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 1-8-97ರ ಶುಕ್ರವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)